ಶ್ರೀ ಬಿ.ರಮಾನಾಥ್ ರೈ (ಸಾರಿಗೆ ಸಚಿವರು)

ಅ. 2001-2002ನೇ ಸಾಲಿನವರೆಗೆ ಅಕೌಂಟೆಂಟ್ ಜನರಲ್ ಅವರಿಂದ ಲೆಕ್ಕ ತನಿಖೆಯಾಗಿದೆ ಹಾಗೂ ಮಜಲು ವಾಹನ ವಿಭಾಗದ ಕಡತಗಳನ್ನು ಗುಜರಿಗೆ ಹಾಕಿರುವುದಿಲ್ಲ.

ಆ. ಉದ್ಭವಿಸುವುದಿಲ್ಲ.

ಇ. ಉದ್ಭವಿಸುವುದಿಲ್ಲ.

ಚಿಂತಾಮಣಿ ನಗರಕ್ಕೆ ಅನರ್ಹವಾದ ನೀರನ್ನು ಕುಡಿಯುವುದಕ್ಕೆ ಸರಬರಾಜು ಮಾಡುತ್ತಿರುವುದು

126(162) ಶ್ರೀ ಚೌಡರೆಡ್ಡಿ (ಚಿಂತಾಮಣಿ) : ಮಾನ್ಯ (ನಗರಾಭಿವೃದ್ಧಿ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೆ?

ಅ. ಚಿಂತಾಮಣಿ ನಗರದಲ್ಲಿ ಕುಡಿಯುವ ನೀರಿಗಾಗಿ ಕೊರೆದಿರುವ 20 ಕೊಳವೆ ಬಾವಿಗಳ ನೀರು ಕುಡಿಯುವುದಕ್ಕೆ ಅನರ್ಹವಾಗಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ.

ಆ. ಈ ಕುರಿತಾಗಿ ಸಹಾಯಕ ಕಾರ್ಯಪಾಲಕ ಅಭಿಯಂತರು ಕರ್ನಾಟಕ ನಗರ ನೀರು ಸರಬರಾಜು ಮತ್ತು ಒಳಚರಂಡಿ ಮಂಡಳಿ, ಬೇತಮಂಗಲ ಇವರು ದಿ; 12-12-2002ರ ಪತ್ರದಲ್ಲಿ ಚಿಂತಾಮಣಿ ನಗರಸಭೆಗೆ ಸೂಚಿಸಿರುವುದು ನಿಜವೇ?

ಇ. ಈ ರೀತಿ ಅನರ್ಹವಾದ ನೀರು ಕುಡಿದು ಸಾರ್ವಜನಿಕರಿಗೆ ತೊಂದರೆಯಾಗುತ್ತಿದ್ದು ಸರ್ಕಾರ ಏನು ಕ್ರಮ ಕೈಗೊಂಡಿದೆ?

ಈ. ಸದರಿ ಲೋಪದೋಷದಿಂದ ಈ ಭಾಗದ ಜನಕ್ಕೆ ನೀರು ಒದಗಿಸಲು ಉಪ್ಪಾರಪೇಟೆ ಬಳಿ ಇರುವ ಕೆರೆಯಿಂದ ನೀರು ಸರಬರಾಜು ಮಾಡಲು ಕೆಯುಡಬ್ಲ್ಯೂಎಸ್ ಮತ್ತು ಡಿ.ಬಿ.ಇಲಾಖೆಯಿಂದ ಅಂದಾಜು ಪಟ್ಟಿ ತಯಾರು ಮಾಡಿಸಿರುವುದು ನಿಜವೆ?

ಉ. ಹಾಗಿದ್ದಲ್ಲಿ, ಅತೀ ಜರೂರಾಗಿ ಸರ್ಕಾರ ತೆಗೆದುಕೊಂಡ ಕ್ರಮವೇನು?

ಶ್ರೀ. ಡಿ. ಕೆ.ಶಿವಕುಮಾರ್ (ನಗರಾಭಿವೃದ್ಧಿ ಸಚಿವರು)

ಅ. ಬಂದಿದೆ.

ಆ. ನಿಜ

ಇ. ಸರ್ಕಾರದ ಹಂತದಲ್ಲಿ ಪರಿಶೀಲಿಸಿಲಾಗುತ್ತಿದೆ.

ಈ. ಹೌದು

ಉ. ಈ ಬಗ್ಗೆ ಸರ್ಕಾರದ ಪರಿಶೀಲನೆಯಲ್ಲಿದೆ.

ಬಾಗೇಪಲ್ಲಿಯಿಂದ ತನಕಲ್ಲಿಗೆ ಬಸ್ ಸೌಕರ್ಯ

127(164) ಶ್ರೀ ಚಾಡರೆಡ್ಡಿ (ಚಿಂತಾಮಣಿ) : ಮಾನ್ಯ ಸಾರಿಗೆ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ. ಬಾಗೇಪಲ್ಲಿಯಿಂದ ತನಕಲ್ಲಿಗವಯಾ ರಾಶ್ಟೆರುವು ಮೂಲಕ ಕರ್ನಾಟಕ ರಾಜ್ಯ ರಸ್ತೆ ಸಾರಿಗೆ ಬಸ್ ಸಾರ್ವಜನಿಕ ಒತ್ತಾಯದ ಮೇರೆಗೆ ಮಂಜೂರು ಮಾಡಿ ಓಡಿಸುತ್ತಿರುವುದು ನಿಜವೇ;